**ಇಂದು ದಿಃ 02.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ. ವಕೀಲರಿಂದಃ**

ನಾನು ಪಿಯುಸಿ ಓದಿದ್ದು, ಬೈಲಕುಪ್ಪೆಯಲ್ಲಿ ಸೈಬರ್ ಸೆಂಟರ್ ಇಟ್ಟುಕೊಂಡಿದ್ದೇನೆ. ಆರೋಪಿ ನನ್ನ ಸೈಬರ್ ಸೆಂಟರ್ ಗೆ ಬರುತ್ತಿದ್ದರು ಆದ್ದರಿಂದ 5-6 ವರ್ಷಗಳಿಂದ ಪರಿಚಯವಿದೆ. ಆರೋಪಿ ಇನ್ಸುರೆನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ಆರೋಪಿ ಮೈಸೂರಿನಲ್ಲಿ ವಾಸವಿದ್ದಾರೆ. ಆರೋಪಿ ಯಾವ ಉದ್ದೇಶಕ್ಕಾಗಿ ನನ್ನಿಂದ ಹಣ ಪಡೆದಿದ್ದಾರೆ ಎಂದು ಗೊತ್ತಿಲ್ಲ. ದಿನಾಂಕ 09.09.2023 ರಂದು ಆರೋಪಿ ನನ್ನಿಂದ ಹಣ ಕೇಳಿದ್ದಾರೆ. ಆರೋಪಿ ಹಣ ಕೇಳಿದ ದಿನವೇ ನಾನು ನಮ್ಮ ಕಚೇರಿಯಲ್ಲಿ ಹಣ ಕೊಟ್ಟಿದ್ದೇನೆ. ವ್ಯವಹಾರ ನಡೆದಾಗ ಆರೋಪಿ ಮತ್ತು ನಾನು ಮಾತ್ರ ಇದ್ದೆವು. ನನ್ನ ಸೈಬರ್ ಸೆಂಟರ್ ಮುಖ್ಯ ರಸ್ತೆಯಿಂದ ಸ್ವಲ್ಪ ಒಳಗಡೆ ಇದೆ ಎಂದರೆ ಸರಿ. ಸೈಬರ್ ಸೆಂಟರ್ ವ್ಯವಹಾರದ ಜೊತೆಗೆ ವ್ಯವಸಾಯ ಮಾಡುತ್ತಿದ್ದೇನೆ. ನನ್ನ ಹೆಸರಿನಲ್ಲಿ ಜಮೀನು ಇರುವುದಿಲ್ಲ ನನ್ನ ತಂದೆಯ 2 ಎಕರೆ ಹೆಸರಿನಲ್ಲಿದೆ. ಕೆನರಾ ಬ್ಯಾಂಕ್ ಮತ್ತು ಇಂಡಿಯನ್ ಓವರ್ ಸೀಸ್ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ನಾನು ಯಾವುದೇ ಸಾಲ ಮಾಡಿಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**